ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ,ಅರಕಲಗೂಡು

**ಸಿ. ಸಿ. ನಂಃ 678/2021**

| | | | | | |
|---|---|---|---|---|---|
| **ಸಾಕ್ಷಿಯ ಹೆಸರು** | ಃ | ರಘು ಡಿ ಎಸ್ | **ದಿನಾಂಕ** | ಃ | **25/11/2023** |
| **ತಂದೆಯ ಹೆಸರು** | ಃ | ಸ್ವಾಮಿ | **ಸಿ ಡಬ್ಲ್ಯೂ** | ಃ | **03** |
| **ವಯಸ್ಸು** | ಃ | **32** ವರ್ಷ | **ಪಿ ಡಬ್ಲ್ಯೂ** | ಃ | **01** |
| **ಉದ್ಯೋಗ** | ಃ | ಪೊಲೀಸ್ ಪೇದೆ **156** | | | |
| **ವಿಳಾಸ** | ಃ | ಗೊರೂರು ಪೊಲೀಸ್ ಠಾಣೆ | | | |

**ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸಸಅ ರವರಿಂದ ಃ-**

ನಾನು 2017 ರಿಂದ 2023 ಜೂನ್ ವರೆಗೆ ನಾನು ಅರಕಲಗೂಡು ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ಆರೋಪಿಯನ್ನು ನಾನು ನೋಡಿರುತ್ತೇನೆ. ದಿಃ 20.01.2021 ರಂದು ರಾತ್ರಿ 8 ಗಂಟೆ ಸಮಯಕ್ಕೆ ಠಾಣೆಯಲ್ಲಿ ನಾನು ಮತ್ತು ಚಾಸಾ 2 ರವರು ಠಾಣೆಯಲ್ಲಿ ಹಗಲು ಕರ್ತವ್ಯಕ್ಕೆ ಇದ್ದಾಗ ಚಾಸಾ1 ರವರು ಠಾಣೆಗೆ ಬಂದು ಪೊಲೀಸ್ ಬಾತ್ಮಿದಾರರ ಮಾಹಿತಿಯ ಮೇರೆಗೆ ಅರಕಲಗೂಡು ತಾಲ್ಲೂಕು, ದೊಡ್ಡಮಗ್ಗೆ ಹೋಬಳಿ , ಯಗಟಿ ಗ್ರಾಮದಲ್ಲಿ ನಾಗರಾಜ ರವರ ಮಗ ದಿನೇಶ ಎಂಬುವವನು ಸಾರ್ವಜನಿಕವಾಗಿ ತನ್ನ ಅಂಗಡಿಯ ಮುಂದೆ ಅಕ್ರಮವಾಗಿ ಹಾಗೂ ಯಾವುದೇ ಪರವಾನಿಗೆ ಇಲ್ಲದೇ ಮದ್ಯವನ್ನು ಮಾರಾಟ ಮಾಡುತ್ತಿದ್ದಾರೆ ಎಂದು ಬಂದ ಖಚಿತ ಮಾಹಿತಿ ಮೇರೆಗೆ ನಮ್ಮನ್ನು ಇಲಾಖಾ ಜೀಪ್ ನಂ.ಕೆಎ-13 ಜಿ-818 ರಲ್ಲಿ ಯಗಟಿ ಗ್ರಾಮಕ್ಕೆ ಸುಮಾರು ರಾತ್ರಿ 8.20 ಸಮಯದಲ್ಲಿ ಯಗಟಿ ಗ್ರಾಮಕ್ಕೆ ಹೋದೆವು. ಅಲ್ಲಿ ಚಾಸಾ 2 ರವರನ್ನು ಪಂಚರನ್ನು ಕರೆದುಕೊಂಡು ಬರಲು ಚಾಸಾ 1 ರವರು ನಿಯೋಜಿಸಿರುತ್ತಾರೆ. ಅದರಂತೆ ಅಲ್ಲೇ ಹೋಗುತ್ತಿದ್ದಂತಹ ಚಾಸಾ 4 ಮತ್ತು ಚಾಸಾ 5 ಇವರನ್ನು ಕರೆದುಕೊಂಡು ಬಂದು ನಮಗೆ ಬಂದ ಮಾಹಿತಿಯನ್ನು ತಿಳಿಸಿ ಪಂಚರಾಗಿರಲು ಹಾಗೂ ತನಿಖೆಗೆ ಸಹಕರಿಸಬೇಕೆಂದು ಕೋರಿಕೊಂಡ ಮೇರೆಗೆ ಅವರು ನಮ್ಮ ಜೊತೆ ಬಂದು ನಂತರ ದಿನೇಶರವರ ಅಂಗಡಿ ಹತ್ತಿರ ಹೋಗಿ ನೋಡಿದಾಗ ನಮ್ಮನ್ನು ಸಮವಸ್ತ್ರದಲ್ಲಿದ್ದದನ್ನು ಕಂಡು ಒಬ್ಬ ವ್ಯಕ್ತಿ ಓಡಿಹೋಗುತ್ತಿದ್ದ. ಆತನನ್ನು ಹಿಡಿದು ಹೆಸರು ವಿಳಾಸ ಕೇಳಲಾಗಿ ಆತ ದಿನೇಶ ಬಿನ್ ನಾಗರಾಜು, 30 ವರ್ಷ , ಪರಿಶಿಷ್ಟ ಜಾತಿ ಜನಾಂಗ , ಅಂಗಡಿ ಕೆಲಸ ಮತ್ತು ವ್ಯವಸಾಯ , ಯಗಟಿ ಗ್ರಾಮ , ದೊಡ್ಡಮಗ್ಗೆ ಹೋಬಳಿ , ಅರಕಲಗೂಡು ತಾಲ್ಲೂಕು ಎಂದು ತಿಳಿಸಿದ್ದು ನಂತರ ಅಂಗಡಿಯನ್ನು ಪರಿಶೀಲಿಸಿದಾಗ ಅಂಗಡಿಯ ಮುಂಭಾಗದಲ್ಲಿ ಪ್ಲಾಸ್ಟಿಕ್ ಚೇರ್ ಮುಂದೆ ಒಂದು ಪ್ಲಾಸ್ಟಿಕ್

ಚೀಲದಲ್ಲಿ ವಸ್ತುಗಳನ್ನು ನೋಡಿದೆವು. ಚೀಲದ ಒಳಗೆ 90 ಎಂ ಎಲ್ 24 ಒರಿಜಿನಲ್ ಛಾಯ್ಸ್ ಡಿಲಕ್ಸ್ ವಿಸ್ಕಿ ಪ್ಯಾಕೇಟ್ ಗಳು ಇದ್ದು , 180 ಎಂ ಎಲ್ ನ 3 ಓಲ್ಡ್ ಟವರ್ ವಿಸ್ಕಿ ಯ ಪ್ಯಾಕೇಟ್ ಗಳು ಇದ್ದವು. ನಂತರ ಚಾಸಾ 1 ರವರು ಈತನು ಅಕ್ರ ಮವಾಗಿ ಸಾರ್ವಜನಿಕ ಸ್ಥಳದಲ್ಲಿ ಕಾನೂನು ಬಾಹಿರ ಚಟುವಟಿಕೆಯನ್ನು ಯಾವುದೇ ಪರವಾನಿಗೆ ಪಡೆಯದೇ ಸಾರ್ವಜನಿಕರಿಗೆ ಮದ್ಯ ಮಾರಾಟ ಮಾಡುತ್ತಿದ್ದನ್ನು ಕಂಡು ಚಾಸಾ1 ರವರು ವರದಿ ತಯಾರಿಸಿದರು. ಆ ವರದಿಯನ್ನು ಚಾಸಾ 2 ರವರಿಗೆ ಕೊಟ್ಟು ಠಾಣೆಯ ಮೊಕದ್ದಮ್ಮೆ ಸಂಖ್ಯೆ ತಿಳಿದುಕೊಂಡು ಬರುವಂತೆ ತಿಳಿಸಿರುತ್ತಾರೆ. ಅವರು ಠಾಣೆಯ ಮೊಕದ್ದಮ್ಮೆ ಸಂಖ್ಯೆ 20/2021 ರಲ್ಲಿ ಕಲಂ 32 , 34 ಕೆ. ಇ. ಆಕ್ಟ್ ಮೇರೆಗೆ ವರದಿಯನ್ನು ಪುನಃ ಚಾಸಾ 2 ರವರು ಸ್ಥಳಕ್ಕೆ ಬಂದು ಚಾಸಾ 1 ರವರಿಗೆ ಕೊಟ್ಟಿರುತ್ತಾರೆ. ನಂತರ ಅಲ್ಲೇ ಇದ್ದ ಮದ್ಯವನ್ನು ಪಂಚರಾದ ಚಾಸಾ 4 ಮತ್ತು 5 ರವರ ಸಮಕ್ಷಮ ತಮ್ಮ ವಶಕ್ಕೆ ಪಡೆದು ಸುಮಾರು 24 90 ಎಂ ಎಲ್ ನ ಪ್ಯಾಕೇಟ್ ಗಳಲ್ಲಿ ಒಂದು ಪ್ಯಾಕೇಟನ್ನು ತೆಗೆದು ಹಾಗೂ ಒಂದು 180 ಎಂ ಎಲ್ ನ ಓಲ್ಡ್ ಟವರ್ ವಿಸ್ಕಿಯ ಪ್ಯಾಕೇಟ್ ನ್ನು ಬಿಳಿಯ ಬಟ್ಟೆಯಲ್ಲಿ ಹಾಕಿ ಅರಗು ಹಾಕಿ ಇಂಗ್ಲೀಷ್ ಅಕ್ಷರ 'ಎ 'ಎಂಬ ಅಕ್ಷರದಿಂದ ಸೀಲ್ ಮಾಡಿ ರಾಸಾಯನಿಕ ವರದಿ ಪಡೆಯಲು ಮೈಸೂರಿನ ಆರ್ ಎಫ್ ಎಸ್ ಎಲ್ ಗೆ ಕಳುಹಿಸಲು ಪತ್ರ ವನ್ನು ತಯಾರಿಸಿದರು. ನಂತರ ಆರೋಪಿಯಾದ ದಿನೇಶನನ್ನು ವಶಕ್ಕೆ ಪಡೆದರು. ನಂತರ ವಶಕ್ಕೆ ಪಡೆದ ಮದ್ಯದ ಪ್ಯಾಕೇಟ್ ಗಳನ್ನು ಸುಮಾರು 9.30 ಗಂಟೆಗೆ ಠಾಣೆಗೆ ತಂದು ಚಾಸಾ 8 ರವರಿಗೆ ವರದಿ ಮಾಡಿ ಮಾಲುಪಟ್ಟಿಯಲ್ಲಿ ಅಳವಡಿಸಿಕೊಂಡಿರುತ್ತೇವೆ. ಈಗ ಸಾಕ್ಷಿಗೆ ಕೃತ್ಯ ಸ್ಥಳ ಮತ್ತು ಅಮಾನತ್ ಮಹಜರ್ ತೋರಿಸಲಾಗಿ ಅದರ ಮೇಲಿನ ತಮ್ಮ ಸಹಿಯನ್ನು ಒಪ್ಪಿದ ಕಾರಣ , ಸದರಿ ಮಹಜರನ್ನು ನಿಪಿ 1 ಎಂದು ಹಾಗೂ ಅದರ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ನನ್ನ ಜೊತೆ ಚಾಸಾ 4 ಮತ್ತು 5 ರವರು ಹಾಜರಿದ್ದು ನಿಪಿ 1 ಕ್ಕೆ ಸಹಿ ಮಾಡಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ಎರಡು ಟೆಟ್ರಾ ಪ್ಯಾಕೇಟ್ ಗಳನ್ನು ಮೇಲೆ ಹೇಳಿದ ದಿನದಂದು ಆರೋಪಿ ಅಂಗಯಿಂದ ವಶಪಡಿಸಿಕೊಂಡ ಟೆಟ್ರಾ ಪ್ಯಾಕೇಟ್ ಗಳು ಆಗಿರುತ್ತವೆ. ಸಾಕ್ಷಿ ಅವುಗಳನ್ನು ಗುರುತಿಸಿದ ಕಾರಣ ಸದರಿ ಟೆಟ್ರಾ ಪ್ಯಾಕೇಟ್ ಗಳನ್ನು ಎಂ.ಓ 1 ಮತ್ತು ಎಂ.ಓ 2 ಎಂದು ಗುರುತಿಸಲಾಯಿತು.

## ಪಾಟೀ ಸವಾಲು ಶ್ರೀ. ಜಿ.ಜಿ.ಆರ್. ವಕೀಲರಿಂದ ಆರೋಪಿಯ ಪರಃ

ಸದರಿ ದಿನದಂದು ರಾತ್ರಿ 8.00 ಗಂಟೆಗೆ ಠಾಣೆಯಲ್ಲಿ ಬಿಟ್ಟು 8.30 ಗಂಟೆ ಸ್ಥಳಕ್ಕೆ ಹೋದೆವು. ನಾವು ಯಗಟಿ ಗ್ರಾಮಕ್ಕೆ ಹೆತ್ತಗೌಡನಹಳ್ಳಿ , ಜೋಡಿಗುಬ್ಬಿ ಕ್ರಾಸ್ ಮುಖಾಂತರ ಸ್ಥಳಕ್ಕೆ ಹೋದೆವು. ನಮ್ಮ ಠಾಣೆಯಿಂದ ಸ್ಥಳವು 12 ರಿಂದ 13 ಕಿ.ಮೀ ಅಂತರದಲ್ಲಿತ್ತು. ಸದರಿ ಮಾರ್ಗವಾಗಿ ಸ್ಥಳಕ್ಕೆ ಹೋದ ಬಗ್ಗೆ ನಾನು

ನನ್ನ ಹೇಳಿಕೆಯಲ್ಲಾಗಲೀ ಅಥವಾ ದೂರಿನಲ್ಲಾಗಲೀ ನಮೂದು ಮಾಡಿರುವುದಿಲ್ಲ. ದೂರಿನಲ್ಲಿ ನಾವು ಸ್ಥಳಕ್ಕೆ ಎಷ್ಟು ಗಂಟೆಗೆ ತಲುಪಿದೆವು ಎಂಬ ಬಗ್ಗೆ ಏನು ನಮೂದು ಇದೆ ಎಂದು ನಾನು ನೋಡಿರುವುದಿಲ್ಲ. ಆರೋಪಿಯ ಪೆಟ್ಟಿಗೆ ಅಂಗಡಿ ಎಂದು ಹೇಳಲಾದ ಪೆಟ್ಟಿಗೆ ಅಂಗಡಿಯಲ್ಲಿ ಮರದ ಪೆಟ್ಟಿಗೆ ಇಡಲಾಗಿತ್ತು. ಅದು ಅಂದಾಜು 6 ಅಡಿ ಎತ್ತರವಿತ್ತು, ಅಗಲ 4 ಅಡಿ ಇತ್ತು. ಸದರಿ ವಿಚಾರವನ್ನು ದೂರಿನಲ್ಲಿ , ನನ್ನ ಹೇಳಿಕೆಯಲ್ಲಿ ಅಥವಾ ಮಹಜರ್ ನಲ್ಲಿ ನಮೂದು ಮಾಡಿದ್ದೀರಾ ಎಂದರೆ ಇದರ ಬಗ್ಗೆ ಚಾಸಾ 1 ರವರಿಗೆ ಗೊತ್ತು. ಸದರಿ ವಿಚಾರವನ್ನು ನನ್ನ ಹೇಳಿಕೆಯಲ್ಲಿ ನಾನು ಹೇಳಿರುವುದಿಲ್ಲ. ಸದರಿ ಹೇಳಿಕೆಯಲ್ಲಿ ನಾನು ಸದರಿ ವಿಚಾರವನ್ನು ಅದು ಅವಶ್ಯಕತೆ ಇಲ್ಲದ ಕಾರಣ ಹೇಳಿರುವುದಿಲ್ಲ. ಸಾಮಾನ್ಯವಾಗಿ ರಾತ್ರಿ 8 ರಿಂದ 9 ಗಂಟೆ ಸಮಯ ಎಂದರೆ ಸಾರ್ವಜನಿಕರು ಓಡಾಡುವ ಸಮಯವಾಗಿರುತ್ತದೆ ಎಂದರೆ ಸರಿ. ಆರೋಪಿಯ ಅಂಗಡಿಯ ಸುತ್ತಮುತ್ತ ಮನೆಗಳು ಇರುವುದಿಲ್ಲ. ನಾವು ಸ್ಥಳಕ್ಕೆ ಹೋದೆವು ಎಂದು ಹೇಳಲಾದ ಸಮಯದಲ್ಲಿ ಯಗಟಿ ಗ್ರಾಮದ ಸ್ಥಳದಲ್ಲಿ 3– 4 ಜನ ಸಾರ್ವಜನಿಕರು ಇದ್ದರು. ಸದರಿ ಸಾರ್ವಜನಿಕರು ನಾವು ಏಕೆ ಸ್ಥಳಕ್ಕೆ ಹೋಗಿದ್ದೆವು ಎಂದು ವಿಚಾರಿಸಿದರು. ಸದರಿ ಸಾರ್ವಜನಿಕರ ಹೆಸರುಗಳನ್ನು ನಾನು ವಿಚಾರಿಸಲಿಲ್ಲ. ಸದರಿ 3 - 4 ಜನರನ್ನು ಪಂಚರಾಗಿ ಸಹಕರಿಸಲು ನಾವು ಕೇಳಿಕೊಳ್ಳಲಿಲ್ಲ. ಮಹಜರ್ ನಲ್ಲಿರುವ ಸಾಕ್ಷಿದಾರರಿಗೆ ನಾವು ಲಿಖಿತ ನೋಟೀಸ್ ನೀಡಲಿಲ್ಲ. ನಾವು ಹೋದ ಪೆಟ್ಟಿಗೆ ಅಂಗಡಿಯಲ್ಲಿ ಬೀಡಿ , ಸಿಗರೇಟ್, ಟೀ , ಕಾಪಿ , ಚಾಕಲೇಟ್ ಇಂತಹ ವಸ್ತುಗಳು ಇದ್ದವು. ಈ ಪೈಕಿ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಳ್ಳಲಿಲ್ಲ. ನಿಪಿ 1 ಮಹಜರ್ ನಲ್ಲಿ ಈ ವಸ್ತುಗಳು ಅಂಗಡಿಯಲ್ಲಿ ಇದ್ದವು ಎಂದು ನಮೂದು ಮಾಡಿರುವುದಿಲ್ಲ. ನನ್ನ ಹೇಳಿಕೆಯಲ್ಲೂ ಸಹ ಸದರಿ ವಿಚಾರವನ್ನು ಹೇಳಿರುವುದಿಲ್ಲ. ಸದರಿ ಪೆಟ್ಟಿಗೆ ಅಂಗಡಿ ರಸ್ತೆ ಬದಿ ಆರೋಪಿಯ ಜಮೀನಿನ ಹತ್ತಿರ ಇತ್ತು. ಸದರಿ ಜಮೀನು ಯಾರ ಹೆಸರಿನಲ್ಲಿತ್ತು ಎಂದು ನಾವು ತಿಳಿದುಕೊಳ್ಳಲಿಲ್ಲ , ಅದರ ಸರ್ವೇ ನಂಬರ್ ಸಹ ನಾವು ತಿಳಿದುಕೊಳ್ಳಲಿಲ್ಲ. ಸದರಿ ಸರ್ವೆ ನಂಬರಿನ ದಾಖಲಾತಿಗಳನ್ನು ನೋಡಲು ಪ್ರಯತ್ನಪಟ್ಟಿರುವುದಿಲ್ಲ. ನಾನು ಹೇಳಿರುವಂತೆ ಅಂಗಡಿಯ ಮುಂಭಾಗದಲ್ಲಿ ಇದ್ದ ಚೇರ್ ಪ್ಲಾಸ್ಟಿಕ್ ಚೇರ್ ಆಗಿತ್ತು. ಸಾಕ್ಷಿ ಮುಂದುವರೆದು ಸದರಿ ಚೇರ್ ಮರದ ಚೇರ್ ಆಗಿತ್ತು ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ನಾವು ವಶಪಡಿಸಿಕೊಂಡಿದ್ದೇವೆ ಎಂದು ಹೇಳಲಾದ ಮದ್ಯದ ಟೆಟ್ರಾ ಪ್ಯಾಕೇಟ್ ಗಳ ಮೇಲೆ ಅವು ಯಾವ ದಿನಾಂಕ ಅಥವಾ ಇಸವಿಯಲ್ಲಿ ಉತ್ಪಾದನೆಯಾಗಿದ್ದವು ಎಂಬ ಬಗ್ಗೆ ನಾವು ನೋಡಿರುವುದಿಲ್ಲ. ನಾವು ಸ್ಥಳಕ್ಕೆ ಹೋಗಿ ನೋಡಿದಾಗ ಎಂ ಓ 1 ಮತ್ತ 2 ಸೇರಿದಂತೆ ಅಲ್ಲಿದ್ದ ಟೆಟ್ರಾ ಪ್ಯಾಕೇಟ್ ಗಳು ತುಂಬಿದ್ದವು . ನಾವು ತುಂಬಿದ ಟೆಟ್ರಾ ಪ್ಯಾಕೇಟ್ ಗಳನ್ನು ವಶಪಡಿಸಿಕೊಂಡಿರುತ್ತೇವೆ. ನ್ಯಾಯಾಲಯದ ಮುಂದಿರುವ ಎಂ ಓ 1 ಮತ್ತು 2 ಟೆಟ್ರಾ ಪ್ಯಾಕೇಟ್ ಗಳು ತೆರೆದ ಟೆಟ್ರಾ ಪ್ಯಾಕೇಟ್ ಗಳು

ಇರುತ್ತವೆ ಎಂದರೆ ಸರಿ. ಸದರಿ ಟೆಟ್ರಾ ಪ್ಯಾಕೇಟ್ ಗಳನ್ನು ಅಂಗಡಿಯ ಮುಂಭಾಗದಲ್ಲಿ ಪ್ಲಾಸ್ಟಿಕ್ ಚೀಲದಿಂದ ವಶಪಡಿಸಿಕೊಂಡೆವು. ತೆರೆದ ಟೆಟ್ರಾ ಪ್ಯಾಕೇಟ್ ಗಳ ಬಗ್ಗೆ ನನ್ನ ಹೇಳಿಕೆಯಲ್ಲಾಗಲೀ , ದೂರಿನಲ್ಲಾಗಲೀ ನಮೂದು ಇರುವುದಿಲ್ಲ ಎಂದರೆ ಸರಿ. ನಾವು ನಿಜವಾಗಿಯೂ ಸ್ಥಳಕ್ಕೆ ಹೋಗಿದ್ದರೆ ಸ್ಥಳದಲ್ಲಿದ್ದ ಜನರನ್ನು ಸಾಕ್ಷಿದಾರರಾಗಿ ಮಾಡುತ್ತಿದ್ದೆವು, ಆದರೆ ನಾವು ಪ್ರಕರಣಕ್ಕಾಗಿ ಚಾಸಾ 4 ಮತ್ತು 5 ಸಾಕ್ಷಿದಾರರನ್ನು ಸೃಷ್ಟಿಸಿಕೊಂಡು ಆರೋಪಿಯ ವಿರುದ್ದ ಸುಳ್ಳು ಪ್ರಕರಣ ಹೂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ 1 ಮಹಜರನ್ನು ಚಾಸಾ 1 ರವರೇ ಸ್ಥಳದಲ್ಲಿ ಬರೆದಿರುತ್ತಾರೆ. ಮಹಜರ್ ಮಾಡಿರುತ್ತೇವೆ ಎಂದು ಹೇಳಲಾದ ಸ್ಥಳದ ಉತ್ತರ ದಿಕ್ಕಿಗೆ ಬಸವರಾಜು ರವರ ಜಮೀನು ಇರಬಹುದು , ಪಶ್ಚಿಮ ದಿಕ್ಕಿಗೆ ನಾಗರಾಜು ರವರ ಜಮೀನು ಇದ್ದು , ದಕ್ಷಿಣಕ್ಕೆ ಆರೋಪಿಯ ಕೋಳಿ ಅಂಗಡಿ ಇತ್ತು. ನಿಪಿ 1 ಮಹಜಜರ್ ಸಹ ಸ್ಥಳದಲ್ಲಿ ಮಾಡಲಾಗಿಲ್ಲ , ಬದಲಾಗಿ ಠಾಣೆಯಲ್ಲಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ 1 ರವರು ನಮ್ಮ ಮೇಲಾಧಿಕಾರಿಗಳು ಆದ ಕಾರಣ ಯಾವುದೇ ಘಟನೆ ನಡೆಯದಿದ್ದರೂ ಸಹ ಅವರ ಆದೇಶದ ಮೇರೆಗೆ ಇಲಾಖಾ ಅಂಕಿಅಂಶಗಳಿಗಾಗಿ ಆರೋಪಿ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

**( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾ.ದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ.**

**ಜೆಎಂಎಫ್‌ಸಿ, ಅರಕಲಗೂಡು.**